Regd No BG 155 31-8-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಂಗಳೂರಿನಲಿ ಭಾರಿ ಮೊತದ ಭಂಗಾರ ಪತೆ

ಮತ್ತೆ ಗೋಹತ್ಯ ನಿಷೇಧ ಚಳವಳಿ

ನವದೆಹಲಿ— ಪೂರಿ ಜಗದ್ಗುರು ಶಂಕರಾಚಾರ್ಯರು, ಸರಕಾರವು ಇನ್ನು ಮೂರು ತಿಂಗಳಲ್ಲಿ ಗೋಹತ್ಯ ನಿಷೇಧ ಶಾಸನವನ್ನು ಮಾಡವಿದ್ದರಿ ನುತ್ತಿ ಚಳವಳಿ ಹೂಡುವುದಾಗಿ ಕೇಂದ್ರ ಸರಕಾರಕ್ಕೆ ಬರೆದಿರುವರು.

★

ಯೋಜನಾ ವರ್ಷ

ನವದೆಹಲಿ— 4 ನೇ ಯೋಜನೆಯಲ್ಲಿ ಶೇಕಡ 15.8 ಅಂದರೆ ರೂ 2271 ಕೋಟಿಯು 69-70 ನೇ ವಾರ್ಷಿಕ ಯೋಜನೆಗೆ ನಿಗದಿ ಮಾಡಲಾಗಿದೆ.

★

ರೂ 11 ಲಕ್ಷ ವಶ

ಮೈಸೂರು— ಎರಡು ಬ್ಯಾಂಕುಗಳ ಲಾಕರ್‌ಗಳಿಂದ ರೂ 11 ಲಕ್ಷ ಕರೆನ್ಸಿ ನೋಟುಗಳನ್ನು ಸೆಂಟ್ರಲ್ ಎಕ್ಸೈಜಿನವರು ಹಿಡಿದರು – ಇದು ಅಕ್ರಮ ಸಾಗಾಣಿಕೆ ಪದಾರ್ಥಗಳನ್ನು ಮಾರಿದ ಹಣವೆಂದು ಅವರು ಹೇಳಿದರು.

○

ಪೆರ್ಷ

ನವದೆಹಲಿ— ಪೆರ್ಷ ಹೆಚ್ಚಿಸುವದರಿಂದ 6 ಲಕ್ಷ ಜನರಿಗೆ ಪ್ರಯೋಜನವಾಗುವುದು.

●

ಶ್ರೀ ಕೃಷ್ಣೋತ್ಸವ

ಟಿ. ನರಸೀಪುರದ ತಾಲ್ಲೂಕ ಕೃಷ್ಣಾಪುರದ ಶ್ರೀ ಸಂತಾನ ಗೋಪಾಲಕೃಷ್ಣಸ್ವಾಮಿಯವರಿಗೆ ತಾ|| 3-9-69 ನೇ ಬುಧವಾರ ಪ್ರಾರಂಭವಾಗಿ ತಾ || 12-9-69 ನೇ ಶುಕ್ರವಾರ ಪ್ರಾತಃಕಾಲ 10 ಘಂಟಿಗೆ ಶ್ರೀ ಗೋವಿಂದರಾಜ ಪಟ್ಟಾಭಿಷೇಕವೂ ಸಾಯಂಕಾಲ 5 ಘಂಟೆಗೆ ಶ್ರೀರುಕ್ಮಿಣಿ ಕಲ್ಯಾಣೋತ್ಸವವೂ ನಡೆಯುತ್ತ.

ಮೈಸೂರು ಸಿಟಿಕೊಆಪರೇಟಿವ್ ಬ್ಯಾಂಕ್ ಡೈರೆಕ್ಟರುಗಳ ಚುನಾವಣೆ 31-8-69 ಸದ್ವಿದ್ಯಾ ಪಾಠಶಾಲೆಯಲ್ಲಿ

ಡಾ. ಬಿ.ಜಿ. ದಾಸ್

ರವರಿಗೆ ನಿಮ್ಮ ವೋಟನ್ನು ಕೊಡಿ

ಭಾರತದ ಬಟ್ಟೆಗಳು

ಲಂಡನ್— ಈ ವರ್ಷ ಬ್ರಿಟನ್ನಿಗೆ ಭಾರತದ ಹತ್ತಿಬಟ್ಟೆ ವ್ಯಾಪಾರವು ಶೇಕಡ ಮೂವತ್ತುಮೂರು ಮೂರನೇ ಒಂದು ಭಾಗ ಇಳಿಯಿತು.

★

ಗಿರಿಯವರಿಗೆ ಅಭಿನಂದನೆ

ನವದೆಹಲಿ— ನಾಗಾಲ್ಯಾಂಡಿನ ನಾಲ್ಕು ಶಾಸಕರು ಅಧ್ಯಕ್ಷ ಶ್ರೀ ಗಿರಿಯವರನ್ನು ಅಭಿನಂದಿಸಿ, ಅವರಿಗೂ ಅವರ ಸತಿಯವರಿಗೂ ಶಾಲುಗಳನ್ನಿತ್ತರು.

★

ಸರಕಾರಿ ಕಟ್ಟಡ ಜಪ್ತಿ

ಹೊಳೇನರಸೀಪುರ— ಶ್ರೀ ಲಕ್ಷ್ಮೀನರಸಿಂಹಯ್ಯನೆಂಬುವರಿಗೆ ಸರಕಾರ ಕೊಡುವಂತೆ ಡಿಕ್ರಿಯಾಗಿರುವ ರೂ 4000 ಪಾವತಿಯಾಗಿಲ್ಲವಾಗಿ ಸರಕಾರಿ ಉರ್ದು ಮಾಧ್ಯಮ ಶಾಲಾ ಕಟ್ಟಡವನ್ನು ಕೋರ್ಟು ಜಪ್ತಿ ಮಾಡಿತು – ನಿಯತ ಕಾಲದಲ್ಲಿ ಹಣ ಪಾವತಿ ಮಾಡದಿದ್ದರೆ ಹರಾಜು ಹಾಕಲಾಗುವದಂತೆ.

★

ಪತ್ರಿಕೆಗಳು

ನವದೆಹಲಿ— 1968 ರಲ್ಲಿ ಪತ್ರಿಕೆಗಳು ಮತ್ತು ಕ್ಲುಪ್ತಕಾಲಿಕ ಪತ್ರಿಕೆಗಳು ಭಾರತದಲ್ಲಿ 10019 ಇದ್ದವು.

ಲಾಟರಿಗೆ ಪ್ರತಿಬಂಧಕವಿಲ್ಲ

ನವದೆಹಲಿ— ಹಲವು ರಾಜ್ಯಗಳು ನಡೆಸುತ್ತಿರುವ ಲಾಟರಿಗಳನ್ನು ಪ್ರತಿಬಂಧಿಸಬೇಕೆಂಬ ಹಲವು ಸದಸ್ಯರ ಕೇಳಿಕೆಯು ಲೋಕಸಭೆಯಲ್ಲಿ ತಿರಸ್ಕರಿಸಲ್ಪಟ್ಟಿತು.

○

ಆರ್ಥಿಕ ರೀತಿ ಪುನರ್ವಿಂಗಡನೆ

ನವದೆಹಲಿ— ಆರ್ಥಿಕ ರೀತಿಯಲ್ಲಿ ರಾಜ್ಯ ಪುನರ್ವಿಂಗಡನೆ ಮಾಡುವ ವಿಷಯ ಸರಕಾರ ಪರ್ಯಾಲೋಚಿಸುತ್ತಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಅಪಾರ ಚಿನ್ನ ವಶ

ಬೆಂಗಳೂರು – ಹೆಚ್ ಎಎಲ್ ವಿಮಾನ ನಿಲ್ದಾಣದಲ್ಲಿ ಬೊಂಬಾಯಿನಿಂದ ಬಂದಿಳಿದ ಇಬ್ಬರು ಪ್ರಯಾಣೀಕರಿಂದ ಸೆಂಟ್ರಲ್ ಎಕ್ಸೈಜಿನವರು ವಿದೇಶೀ ಗುರುತಿನ ರೂ 2 ಲಕ್ಷ ಬೆಲೆಯ ಚಿನ್ನ ವಶಪಡಿಸಿಕೊಂಡರು.

★

ಸಂಸ್ಕೃತ

ನವದೆಹಲಿ— ಸಂಸ್ಕೃತ ಭಾಷಾಭಿವೃದ್ಧಿ ಮತ್ತು ಅದನ್ನು ನೂತನ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವ ವಿಷಯದಲ್ಲಿ ಸರಕಾರ ತೀವ್ರ ಪರ್ಯಾಲೋಚನೆ ಮಾಡುತ್ತಿರುವದೆಂದೂ, ಆದರೆ ಅದನ್ನು ಖಡ್ಡಾಯ ಮಾಡುವ ಪ್ರಶ್ನೆ ಇಲ್ಲವೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

★

ಪತ್ರಿಕೆಗಳಿಗೆ ಸರಕಾರದ ಸಾಲ

ನವದೆಹಲಿ— ಪತ್ರಿಕೆಗಳಿಗೆ ಸರಕಾರದ ನೇರ ಸಾಲವು ಅವುಗಳ ಸ್ವಾತಂತ್ರ್ಯವನ್ನು ಕೆಡಿಸುವದೆಂದೂ ತತ್ವದಲ್ಲಿ ಅದು ಕೂಡದೆಂದೂ ಪ್ರೆಸ್ ಕೌನ್ಸಿಲ್ ತಿಳಿಸಿದೆ.

★

ರಾಷ್ಟ್ರ ಉಪಾಧ್ಯಕ್ಷರು

ನವದೆಹಲಿ— ರಾಷ್ಟ್ರ ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಉಮೇದುವಾರರು ಶ್ರೀ ಪಾಠಕ್‌ರವರು ಚುನಾಯಿಸಲ್ಪಟ್ಟರು.

★

ಮಂಚನಬೆಲೆ ಅಣಕಟ್ಟು

ರಾಮನಗರ— ರೂ 2 91 ಕೋಟಿಯ ಮಂಚನಬೆಲೆ ಅಣಕಟ್ಟು ಮೂರು ಹಂತದಲ್ಲಿ ಮುಗಿಸಲಾಗುವುದೆಂದೂ, ಮುಗಿದ ನಂತರ 13000 ಎಕ್ರೆ ಭೂಮಿ ವ್ಯವಸಾಯಕ್ಕೆ ನೀರು ಒದಗುವುದೆಂದೂ ನೀರಾವರಿ ಚೀಫ್ ಇಂಜಿನಿಯರರು ಹೇಳಿದರು.

○

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸಂಪಾದಕ 'ಸತ್ಯವಾದಿ'
ಚಾಮರಂಜಪುರಂ, ಮೈಸೂರು 4.

ಉಪ್ಪಿನ ತೆರಿಗೆ

ಬೊಂಬಾಯಿ—ರೂ 20 ಕೋಟಿಯಿಂದ 40 ಕೋಟಿ ಆದಾಯ ದೊರೆಯುವ ಉಪ್ಪಿನ ತೆರಿಗೆ ವಿಧಿಸಲು ಕೈಗಾರಿಕಾ ಅರ್ಥಶಾಸ್ತ್ರಜ್ಞ ಡಾ|| ಹರಾಜ ಹೇಳಿದರು.

★

ದಿನ್ಮಣಿ

ನಮ್ಮ ಆಶಯವು ವಿಶ್ವಕ್ಕೆ ಒಳ್ಳೆಯದನ್ನು ಮಾಡುವುದಕ್ಕಾಗಿ, ನಮ್ಮ ಹೆಸರುಗಳನ್ನು ಸ್ವಪ್ರಶಂಸೆ ಮಾಡುವುದಕ್ಕಲ್ಲ.

ಪ್ರಕಟಣೆ

ವಿಭಾಗದ ಸಂಗ್ರಹ ಪ್ರದೇಶದಲ್ಲಿ ಸಂಗ್ರಹವಾಗಿರುವ ಕೆಲಸಕ್ಕೆ ಬಾರದ ಸೀಮೆಂಟು ಚೀಲಗಳನ್ನು ಕೊಳ್ಳುವುದಕ್ಕಾಗಿ ಸಾರ್ವಜನಿಕರಿಂದ 8–9–1969 ರವರೆಗೆ ಸೀಲಾದ ಟೆಂಡರುಗಳು ಸ್ವಾಗತಿಸಲ್ಪಟ್ಟಿವೆ.

ಕೆಲಸಕ್ಕೆ ಬಾರದ ಮತ್ತು ನಿರಾಕರಿಸಲ್ಪಟ್ಟ ಖಾಲಿ ಗೋಣಿ ಚೀಲಗಳು
5000 ಅಂದಾಜು
ಇ. ಎಂ. ಡಿ ರೂ. 250/–

ಅಗತ್ಯವಾದ ಮಾಹಿತಿ ತೆರಿಗೆ ಕೇಕಡ 3 ಮತ್ತು ಸೇಲ್ಸ್ ರೂ. 26 ಸೆಸ್ ಮತ್ತು ಇನ್ನಾವುದಾದರೂ ತೆರಿಗೆಗಳಿದ್ದಲ್ಲಿ ಅವನ್ನು ಖಾಲಿ ಚೀಲಗಳನ್ನು ಕೊಡುವಾಗ ಸಂಗ್ರಹ ಮಾಡಲಾಗುವುದು.

ಕೆಲಸದ ಎಲ್ಲಾ ದಿನಗಳಲ್ಲೂ ಬೆಳಿಗ್ಗೆ 10–30 ರಿಂದ ಸಂಜೆ 5–30 ರವರೆಗೆ ವಿಭಾಗ-ಸಂಗ್ರಹ ಪ್ರದೇಶದಲ್ಲಿ ಖಾಲಿ ಸೀಮೆಂಟು ಚೀಲಗಳನ್ನು ಆಸಕ್ತರಾದ ಜನರು ಪರೀಕ್ಷಿಸಬಹುದು.

ಮೈಸೂರಿನಲ್ಲಿರುವ ಕಟ್ಟಡಗಳ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ಹೆಸರಿಗೆ ಇ. ಎಂ. ಡಿ. ಡಿಪಾಜಿಟ್ ಮಾಡಿದ್ದಕ್ಕೆ ಖಜಾನೆಯ ಚಲನ್ನು ಪ್ರತಿ ಟೆಂಡರ್‌ನೊಡನೆ ಇರತಕ್ಕದ್ದು.

ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ಕೊಡದೆ ತಿರಸ್ಕರಿಸುವ ಹಕ್ಕು ಈ ಕೆಳಗೆ ಸಹಿ ಮಾಡಿರುವವರಿಗೆ ಇದೆ.

(ಸಹಿ) ವೈ. ಶಿವಪ್ಪ
ಎಕ್ಸಿಕ್ಯುಟಿವ್ ಇಂಜಿನಿಯರ್
ಕಟ್ಟಡ ವಿಭಾಗ, ಮೈಸೂರು - 1

ಪ್ರಧಾನಿಗಳೊಡನೆ ಮುಖ್ಯಮಂತ್ರಿಗಳು

ನವದೆಹಲಿ— ಮೈಸೂರು ರಾಜ್ಯದ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಮೈಸೂರಿಗೆ 5 ನೇ ಆರ್ಥಿಕ ಕಮಿಷನ್ ನೀಡಿರುವ ಅವಾರ್ಡು ಬಗ್ಗೆ ಪ್ರಧಾನಿಗಳವರೊಡನೆ ಮಾತಾಡಿ, ಕೇಂದ್ರದ ಆದಾಯದಲ್ಲಿ ಇತರ ರಾಜ್ಯಗಳಿಗೆ ಹೆಚ್ಚು ಸಿಕ್ಕಿ ಮೈಸೂರಿಗೆ ಕಡಮೆಯಾಗಿರುವದನ್ನು ತಿಳಿಸಿದರು

★

ಪತ್ರಿಕಾಗೋಷ್ಠಿ

ಮೈಸೂರು— ಪೌರಸಭಾಧ್ಯಕ್ಷ ಶ್ರೀ ಎಂ ಎ ತಿಮ್ಮಯ್ಯನವರು, ಗುರುವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿ ಸುರಂಗ ಮಾರ್ಗ ನಿರ್ಮಿಸುವ, ಕ್ಯಾತಮಾನಹಳ್ಳಿಯಲ್ಲಿ ಭಿಕ್ಷುಕರ ಪರಿಹಾರ ಕೇಂದ್ರ ಸ್ಥಾಪಿಸುವ, ಯಾದವಗಿರಿಯಲ್ಲಿ ನೀರು ಸರಬರಾಜಿನ ಓವರ್ ಹೆಡ್ ಟ್ಯಾಂಕು ನಿರ್ಮಿಸುವ, ಕಿಲ್ಲೇ ಮೊಹಲ್ಲಾದಿಂದ ಎಲೆ ತೋಟಗಳನ್ನು ತೆಗೆಯುವ ವಿಷಯದಲ್ಲಿ ಸರ್ಕಾರದಿಂದಾಗಿರುವ ಅನಾನುಕೂಲ ಮುಂತಾದ್ದನ್ನು ವಿವರಿಸಿದರು.

ಮೈಸೂರು ಪುರಸಭಾ ಕಛೇರಿ
ಮೈಸೂರು : ತಾ : 8–8–1969
ಸಿ.ತಿ.ಪಿ.ಆರ್. 139/67–68

ಪ್ರಕಟಣೆ

ಮೈಸೂರು ಪುರಸಭಾ ಜಾಹಿರಾತು ನಿಬಂಧನೆ (ಮೈಸೂರು ಸಿಟಿ ಮುನಿಸಿಪಾಲಿಟಿ ಆಡ್ವರ್ಟೈಜ್‌ಮೆಂಟ್ ಬೈಲಾಸ್) ಮೈಸೂರು ಸರ್ಕಾರವು ತಾ: 23–7–1969 ರ ಆಜ್ಞೆ ನಂ. ಎಂ.ಹೆಚ್.ಎ. 68 (11) ಎಂ.ಎನ್.ಎ. 69 ರಲ್ಲಿ ಒಪ್ಪಿರುವುದನ್ನು ಮೈಸೂರು ನಗರದಲ್ಲಿ 1–10–1969 ನೇ ಬುಧವಾರದಿಂದ ಜಾರಿಗೆ ಕೊಡಲಾಗುತ್ತೆ. ಇವುಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲಿಚ್ಛಿಸುವವರು ಕಛೇರಿಯು ನಡೆಯುವ ಕಾಲದಲ್ಲಿ ಮೈಸೂರು ಪುರಸಭಾ ಕಛೇರಿಯಲ್ಲಿ ಪಡೆಯಬಹುದು.

(ಸಹಿ) ಪಿ. ಪಿ. ಪ್ರಭು
ಮುನಿಸಿಪಲ್ ಕಮಿಷನರ್

ಜಯಪ್ರದ 6 ನೇ ವಾರ
ವುಡ್‌ಲ್ಯಾಂಡ್ಸ್
— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....
ಇಂತಕಾಮ್ INTAQAM
ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್
[ದಿನ 3 ಪ್ರದರ್ಶನಗಳು]

ಆಪೆರಾ— ಆನೋಖಾ 3 ನೇ ವಾರ
ಆಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್
ನಪ್‌ನೋನ್ ಕ ಸೌದಾಗರ್
ನಟವರ್ಗ— ರಾಜಕಪೂರ್, ಹೇಮಮಾಲಿನಿ
ಸಂಗೀತ : ಶಂಕರ್ ಜೈಕಿಷನ್
ದಿನ 3 ಆಟಗಳು

Quality Printing — Neat Binding
Lakshminarasimha Press
Sivarampet, Mysore

Help The Gorakshana

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ
ಗೋರಕ್ಷಣೆಗೆ—ಚಂಚಲ—ನೀಡಿ
Protect the Cow

SHAKTI SUDHA
A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 5